(SRI RAMAKRISHNA HEGDE)

management of the district board was entrusted to the Deputy Commissioeer Now after the constitution of taluka boards, almost all the functions of the erstwhile district boards have been entrusted to these taluk boards except the management of the schools.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ತಾಲ್ಲೂಕು ಬೋರ್ಡು ಮಲ್ಟಿಪರ್‌ಪಸ್ ಸೊಸೈಟಿ ಇದ್ದ ಹಾಗೆ ಅದರ ವ್ಯಾಪ್ತಿ ಬಹಳ ದೊಡ್ಡದು. ಆದ್ದರಿಂದ ಈ ವಿದ್ಯಾ ಸಂಸ್ಥೆಗಳನ್ನು ಎಫಿಷಂಟಾಗಿ ಮ್ಯಾನೇಜ್ ಮಾಡಲು ಒಂದು ಕಾರ್ಪೋರೇಷ್ ಏಕೆ ಮಾಡ ಬಾರದು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದು ಒಂದು ಹೊಸ ಸೂಚನೆ, ಇದನ್ನು ಗಮನದಲ್ಲಿಡಲಾಗುತ್ತದೆ.

Sri G. V. GOWDA.—The Minister was pleased to say that the other schools will be handed over to private agencies. May I know whether private agencies include mutts and churches ?

Sri RAMAKRISHNA HEGDE.—Not necessarily. It means, where a society is formed, a trust is constituted, if they take over the management. Government will readily hand over the management of the schools.

ಶ್ರೀ ಬಿ. ಹುಚ್ಚೇಗೌಡ.—ಡೆಪ್ಯುಟಿ ಕಮೀಷನರು ಮ್ಯಾನೇಜ್ ಮಾಡುವಾಗ ಸಾಲದೇ ಬರುವ 10% ಯಾರು ಕೊಡುವವರು ? ಅವರ pocket ನಿಂದ ಕೊಡುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಫೀಜು ಮುಖಾಂತರ ಬರುವ ಆದಾಯವನ್ನೂ, ಗ್ರಾಂಟ್ ಇಯೆಡ್ ಮುಖಾಂತರ ಬರುವ ಹಣವನ್ನೂ ಸೇರಿಸಿದ ಮೇಲೂ ಸಾಲದೆ ಬಂದರೆ ಲಿಕ್ವಿಡ್ ಆಸೆಟ್ಸ್‌ನಿಂದ ತೆಗೆದು ಕೊಳ್ಳುತ್ತಾರೆ.

Sri M. C. BASAPPA.—Is it not a fact that Government have not passed orders to take over the management of these high schools ?

Sri RAMAKRISHNA HEGDE.—Just now the Hon'ble Minister for Education informed the House that with regard to the high schools in South Kanara, orders have already been passed. With respect to the other schools, as soon as these private or voluntary agencies or taluka boards come forward to take over their managements, Government will immediately pass orders.

ಶ್ರೀ ಇ. ನಾರಾಯಣಗೌಡ.—ಈಗ ರಾಜ್ಯದಲ್ಲಿ ಎಷ್ಟು ಹೈಸ್ಕೂಲುಗಳನ್ನು ಜಿಲ್ಲಾಧಿಕಾರಿಗಳ ವಶಕ್ಕೆ ಕೊಟ್ಟಿದ್ದೀರೋ ಅದರ ಆಡಳಿತದ ಬಗ್ಗೆ ತೃಪ್ತಿಕರವಾಗಿ ಕೆಲಸ ಮಾಡುತ್ತಿವೆಯೋ ಇಲ್ಲವೋ ಎಂಬ ವರದಿ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇನ್ನುವರೆಗೂ ಯಾವ ಹೈಸ್ಕೂಲನ್ನೂ ವಹಿಸಿ ಕೊಟ್ಟಿಲ್ಲ. ಕೊಡಬೇಕು. ಈಗಾಗಲೇ ಆಜ್ಞೆ ಆಗಿದೆ. ತೃಪ್ತಿಕರವಾಗಿದೆಯೇ ಅಥವಾ ಅತೃಪ್ತಿಕರವಾಗಿದೆಯೇ ಹೇಗಿದೆ ಎಂದು ಹೇಳುವುದು ಕಷ್ಟ.

2-00 P.M.

ಶ್ರೀ ಎ. ಕೃಷ್ಣಪ್ಪಚೆಟ್ಟಿ.—ಖಾಸಗಿ ಸಂಸ್ಥೆಗಳಿಗೆ ಹೈಸ್ಕೂಲುಗಳನ್ನು ಬಿಟ್ಟು ಕೊಡುವ ಧೋರಣೆ ಮುಂದುವರಿದರೆ ಎಲ್ಲ ಶಾಲೆಗಳನ್ನೂ ಖಾಸಗಿಯವರಿಗೇ ಬಿಟ್ಟು ಕೊಡುವ ಅವಕಾಶ ಬರಬಹುದಲ್ಲವೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ಊಹೆಯ ವಿಚಾರವಾಯಿತು. ಸಾಮಾನ್ಯವಾಗಿ ಸರ್ಕಾರದ ನೀತಿಯ ವಿಚಾರ ನಾನು ಹೇಳಿದೆ. ಮಾನ್ಯ ಸದಸ್ಯರು ಹೇಗಾದರೂ ಊಹೆ ಮಾಡಲು ಅವರಿಗೆ ಅಧಿಕಾರವಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾಲ್ಲೂಕು ಬೋರ್ಡಿಗೆ ಹೈಸ್ಕೂಲುಗಳನ್ನು ವಹಿಸುವುದರಿಂದ ಅಲ್ಲಿ ರಾಜಕೀಯ ತಲೆಹಾಕಿ, ಪ್ರಭಾವದ ಮೇಲೆ ಎರಡು ಸಾವಿರ ಪ್ರಜಾ ಸಂಖ್ಯೆಯಿರುವ ಬೆಂಗಾಡು ಪ್ರದೇಶಗಳಿಗೂ ಕೊಡಬಹುದಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆ ರೀತಿ ಆಗಬಹುದೆಂಬ ಅಂಜಿಕೆ ಸರ್ಕಾರಕ್ಕಿಲ್ಲ ; ಜನರಿಗೆ ಅಧಿಕಾರ ಕೊಡುವುದರಿಂದ ಯಾವ ತೊಂದರೆಯೂ ಆಗುವುದಿಲ್ಲ ವೆಂಬುದು ನಮ್ಮ ಭಾವನೆ.

Mr. SPEAKER.—Question hour is over.

QUESTIONS FOR ANSWERS ON THE DAY

(but not taken up).

Abolition of Revenue Nad Offices in Coorg District.

*Q.—370. Sri A. P. APPANNA (Virajpet).—

Will the Government be pleased to state :—

(*a*) whether they have decided to abolish the Revenue Nad Offices in Coorg District ;

(*b*) if so, what are the alternate arrangements that Government have proposed to make in this behalf ;

(*c*) whether it has been brought to the notice of the Government that the Nad Offices are functioning very well and the same can be adopted throughout the State ;

(*d*) whether they are aware that there is lot of public agitation against the closing down of the Nad Offices ?

(*e*) what are the considerations that weighed in favour of abolishing the Nad Offices ?